## ಬೋರ್ಡಿಂಗ್‌ನಿಂದ ನಿರಾಳವಾಯಿತು!

ಕಳೆದ ವರ್ಷ ಮಕ್ಕಳ ಒತ್ತಾಯಕ್ಕಾಗಿ ಒಂದು ತಿಂಗಳ ನಾಯಿ ಮರಿಯನ್ನು ತಂದು ಸಾಕಿದೆ. ಅದಾಗಿ ಎರಡು ತಿಂಗಳಿಗೇ ದೀಪಾವಳಿ ಹಬ್ಬ. ಮೂರು–ನಾಲ್ಕು ದಿನಗಳ ಮಟ್ಟಿಗೆ ಊರಿಗೆ ಹೋಗಬೇಕಿತ್ತು. ಅಕ್ಕಪಕ್ಕದ ಮನೆಯವರಲ್ಲಿ ನಾಯಿಯನ್ನು ನೋಡಿಕೊಳ್ಳುವಂತೆ ವಿನಂತಿಸಿದೆ. ಯಾರೂ ಒಪ್ಪಲಿಲ್ಲ. ಬಸ್, ಟ್ರೈನ್‌ನಲ್ಲಿ ನಾಯಿ ಕೊಂಡೊಯ್ಯಲು ಅನುಮತಿ ಕೂಡ ಇಲ್ಲ. ಇದೇ ಚಿಂತೆಯಾಯಿತು. ನಾಯಿಗೆ ವ್ಯಾಕ್ಸೀನ್ ಹಾಕಿಸುವ ಪಶುವೈದ್ಯರ ಬಳಿ ಹೋದೆ. ಅಲ್ಲಿ ಬೇರೆ ಬೇರೆ ಮಂದಿ ತಮ್ಮ ನಾಯಿಗಳನ್ನು ಚಿಕಿತ್ಸೆಗಾಗಿ ಕರೆತಂದು ಪಾಳಿಯಲ್ಲಿ ನಿಂತಿದ್ದರು. ಅವರಲ್ಲೇ 'ನಾಯಿಯನ್ನು ನೋಡಿಕೊಳ್ಳುವವರು ಇಲ್ಲಿ ಯಾರಾದರೂ ಇದ್ದಾರಾ?' ಎಂದು ವಿಚಾರಿಸಿದೆ.

ಆಗ ತಿಳಿಯಿತು, ಬೆಂಗಳೂರಿನಲ್ಲಿ ನಾಯಿ ನೋಡಿಕೊಳ್ಳುವ ಬೋರ್ಡಿಂಗ್, ಹಾಸ್ಟೆಲ್‌ಗಳು ಸಾಕಷ್ಟು ಇವೆ ಎಂದು. ವಿಚಾರಿಸಿದಾಗ ಐದಾರು ನಾಯಿ ಬೋರ್ಡಿಂಗ್ ನಮ್ಮ ಏರಿಯಾ, ಅಕ್ಕಪಕ್ಕದ ಏರಿಯಾಗಳಲ್ಲಿ ಇದ್ದವು. ಅದರ ಮಾಲೀಕರ ನಿಬಂಧನೆಗಳನ್ನು ಪಾಲಿಸಿ ನಾಯಿಯನ್ನು ಬೋರ್ಡಿಂಗ್‌ನಲ್ಲಿ ಬಿಟ್ಟೆ. ಊರಿಗೆ ನಿಶ್ಚಿಂತೆಯಾಗಿ ಹೋದೆವು. ಹೋದ ಮೇಲೆಯೂ ನಾಯಿಯ ಬಗ್ಗೆ ಫೋನ್ ಮಾಡಿ ವಿಚಾರಿಸುತ್ತಿದ್ದೆವು. ನಾಯಿ ಸುರಕ್ಷಿತವಾಗಿ ಇದೆ ಎಂದು ಖಚಿತಪಡಿಸಿಕೊಂಡೆವು. ನಿರಾಳವಾಗಿ ಹಬ್ಬ ಮುಗಿಸಿ ಮನೆಗೆ ಬಂದೆವು.

—ಬಿಂದು, ನಾಯಿ ಮಾಲಕಿ, ಜಯನಗರ ಬೆಂಗಳೂರು

### ಕಾಳಜಿಯೊಂದಿಗೆ ಶಿಸ್ತಿನ ಕಲಿಕೆ

ಮೈಸೂರು ತಾಲ್ಲೂಕಿನ ಡಿ. ಸಾಲುಂಡಿ ಬಳಿ ನಾಯಿಗಳ ಹಾಸ್ಟೆಲ್ ಹಾಗೂ ತರಬೇತಿ ಕೇಂದ್ರ ನಡೆಸುತ್ತಿರುವ ಪ್ರಮೋದ್ ಬಿ.ಸಿ. ಅವರು, ನಾಯಿಗಳಿಗೆ ಶಿಸ್ತಿನ ವರ್ತನೆಯನ್ನೂ ಕಲಿಸುವುದರಲ್ಲಿ ಪರಿಣತರು.

'ನಾಯಿಗಳ ಮೇಲೆ ಮೊದಲಿನಿಂದಲೂ ನನಗೆ ಅಪಾರ ಮೋಹ. ವಿವಿಧ ತಳಿಯ ನಾಯಿಗಳನ್ನು ಪಳಗಿಸಿ, ತರಬೇತಿ ನೀಡುವ ಹವ್ಯಾಸ ನನ್ನದು. ಇದಕ್ಕಾಗಿ ಮೈಸೂರಿನಲ್ಲಿ 'ಡಿ ಕೆನಾಲ್ ವರ್ಕಿಂಗ್ ಡಾಗ್' ಎಂಬ ಬೋರ್ಡಿಂಗ್ ಆರಂಭಿಸಿದೆ. ಎಂಟು ವರ್ಷಗಳಿಂದ ನಾಯಿಗಳನ್ನು ನೋಡಿಕೊಳ್ಳುವುದು, ತರಬೇತಿ ನೀಡುವುದು ಮಾಡುತ್ತಿರುವೆ. ಇತ್ತೀಚೆಗೆ ಭರ್ಜರಿ ಯಶಸ್ಸು ಕಂಡ 'ಚಾರ್ಲಿ 777' ಸಿನಿಮಾದಲ್ಲಿ ನಟಿಸಿರುವ 'ಚಾರ್ಲಿ' ನಾಯಿಗೆ ನಾನೇ ತರಬೇತಿ ನೀಡಿದ್ದು. ಸುಮಾರು ಆರು ತಿಂಗಳ ಕಾಲ ಆ ನಾಯಿಯನ್ನು ಟ್ರೈನ್‌ಅಪ್ ಮಾಡಿರುವೆ. ಸಿನಿಮಾ ಸೂಪರ್‌ಹಿಟ್ ಆದ ಬಳಿಕ ಮೈಸೂರಿನಲ್ಲಿ ನಾಯಿ ಸಾಕುವವರ ಸಂಖ್ಯೆಯೂ ಹೆಚ್ಚಿದೆ. ಬೋರ್ಡಿಂಗ್‌ನಲ್ಲಿ ಬಿಡುವವರ ಸಂಖ್ಯೆಯೂ ಹೆಚ್ಚುತ್ತಿದೆ' ಎಂದು ಹೇಳುತ್ತಾರೆ ಪ್ರಮೋದ್.

(ಪ್ರಮೋದ್ ಸಂಪರ್ಕ: 9845444430)

### ಈಜಾಡುವ ಭಾಗ್ಯ!

ಬೆಂಗಳೂರಿನ ಜೆ.ಪಿ. ನಗರದಲ್ಲಿ 'ಪ್ಲಾಟಿನಂ ಪಾವ್ ಪ್ಯಾರಡೈಸ್' ಎಂಬ ನಾಯಿಗಳ ಬೋರ್ಡಿಂಗ್ ಇದೆ. ಅಲ್ಲಿ ಬೋರ್ಡಿಂಗ್‌ಗಾಗಿ ಬರುವ ನಾಯಿಗಳಿಗೆ ಈಜಾಡುವ ಅವಕಾಶವೂ ಇದೆ. ನಾಯಿಗಳಿಗಾಗಿಯೇ ಸ್ವಿಮಿಂಗ್ ಪೂಲ್ ನಿರ್ಮಿಸಿದ್ದಾರೆ ಬೋರ್ಡಿಂಗ್‌ನ ಮಾಲೀಕ ಪ್ರವೀಣ್ ಎನ್.

ಅಪಘಾತದಿಂದ ಪೆಟ್ಟಾಗಿರುವ ನಾಯಿಗಳು, ಶಸ್ತ್ರಚಿಕಿತ್ಸೆ ಆದ ನಾಯಿಗಳು, ಕಾಲುಗಳ ಮೇಲೆ ಗಾಡಿ ಹೋಗಿ ಗಾಯವಾದ ನಾಯಿಗಳಿಗೆ ಆರೈಕೆ ಅಲ್ಲಿ ಸಿಗುತ್ತದೆ. ಕಳೆದ ಮೂರು ವರ್ಷಗಳಿಂದ ಪ್ರವೀಣ್ ಈ ಹಾಸ್ಟೆಲ್ ನಡೆಸುತ್ತಿದ್ದಾರೆ. ಪ್ರತಿ ತಿಂಗಳು ಸರಾಸರಿ 150ಕ್ಕೂ ಹೆಚ್ಚು ನಾಯಿಗಳನ್ನು ಅವರು ನೋಡಿಕೊಳ್ಳುತ್ತಾರೆ. ದಿನನಿತ್ಯ ಮೂರು ನಾಲ್ಕು ನಾಯಿಗಳನ್ನಾದರೂ ಮಾಲೀಕರು ತಂದು ಬಿಟ್ಟುಹೋಗುತ್ತಾರೆ.

'ಖುಷಿಗಾಗಿ, ಮನೆ ಕಾಯುವುದಕ್ಕಾಗಿ ವಿವಿಧ ತಳಿಯ ನಾಯಿಗಳನ್ನು ಸಿಟಿಗಳಲ್ಲಿ ಜನ ಸಾಕುತ್ತಾರೆ. ಅವರಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ನಾಯಿಗಳ ಬೋರ್ಡಿಂಗ್ ಆರಂಭಿಸಿದೆ. ನಮ್ಮ ಸ್ವಂತದ್ದೇ ನಾಲ್ಕು ನಾಯಿಗಳಿವೆ' ಎಂದು ಹೇಳುತ್ತಾರೆ ಪ್ರವೀಣ್.





ಬೆಂಗಳೂರಿನ ಜೆ.ಪಿ. ನಗರದ ಪ್ಲಾಟಿನಂ ಪಾವ್ ಪ್ಯಾರಡೈಸ್ ಬೋರ್ಡಿಂಗ್‌ನಲ್ಲಿ ನಾಯಿಗಳ ಜೊತೆಗೆ ಮಾಲೀಕರು